ಅಥವಾ ಬಾಕಿ ಪೊಬಲಗು ಪಾನತಿ ಮಾಡದೆ ಯಿದ್ದುಗ್ಯೂ ಈ ಬಾಬು ಪುನಹ ಹರಾಜು ಮಾಡಲ್ಪಟ್ಟು ಆವರಿಂದ ತೆಂಬುಗುವ ನಷ್ಟ ಕ್ಕೆ ಮೊದಲ ಚಡಸವಾಲೆದಾರನು ಗುರಿಮಾಡಲ್ಪಡುವನು.

7. ಇಜಾರದಾರನು ಹಿಡುವಳಿ ಜಮೀನಿನಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿವಿನಹ ಆರತಿ ಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿರತಕ್ಕ ಕಲ್ಲುಗಳು ಜವಾಯಿಸಿಕೊಳ್ಳುವದಕ್ಕೆ ಆಗಲಿ ಅಥವಾ ಇಜಾರದಾರ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರ್ರಿಗೆ ಅಧಿಕಾರ ವಿರುವದಿಲ್ಲ.

8. ಇಜಾರದಾರನು ಹುಲ್ಲುಬನ್ನಿ ಯಾ ಹುಲ್ಲುಗಾವಲ್ ಇಜಾರದಾರ್ರ ಹಕ್ಕಿಗೆ ಆಟಂಕವಪಡಿಸಕೂಡದು.

9. ಹಿಡುವಳೀಲಿ ಇಲ್ಲದ ಜರ್ಮಿಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರದಾರನ ಅಭ್ಯಂತರವೇನೂ ಯಿರುವದಿಲ್ಲ. ಪರಂತು, ಅಂಥಾ ಜರ್ಮಿಗಳಲ್ಲಿ ಕಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವನಿಗೆ ಹಕ್ಕು ಯಿರುತ್ತೆ.

10. ಕಲ್ಲುಗಳನ್ನ ಜವಾಯಿಸುವದಕ್ಕಾಗಿ ಜರ್ಮಿಗಳನ್ನ ಇಜಾರೆದಾರನು ಅಗಿಯಕೂಡದು. ಬಂದುವೇಳೆ ಆಗದರೆ ಸಾಗುವಳಿಗೆ ಅನುಕೂಲವಾಗುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

ಅಬ್ದುಲ್‌ರಹಿಮ್ಮಾ,
ಡಿಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 45.

ಮೃತಪಟ್ಟ ಪುಟ್ಟೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು) ಚವ್ವಡೆಗವುಡರು, ಮೃತಪಟ್ಟ ಸದರೀ ಪುಟ್ಟೇಗವುಡರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮಳವಳ್ಳಿ ತಸ ಪ ಸ್ಥಳವ ಸದರೀ ಚವ್ವಡೆಗವುಡರು ಸದರೀ ವಾಸಸ್ಥರಾಗಿ ಮೃತಪಟ್ಟ ಪುಟ್ಟೇಗವುಡರ ಜಿಂವಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟು ಮೇರಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚವ್ವಡೆಗವುಡರ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಕೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪುಟ್ಟೇಗವುಡರ ಆಸ್ತಿಗೆ ಹಕ್ಕುದಾರರಾದ ವಿಷಯ್ರರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

1889ನೇ ಇಸವಿ ಫಿಬ್ರವರಿ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟುಮೊಹರ್ ದುತ್ತುನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

1889ನೇ ಇಸವಿ ಅರ್ಜೀ ನಂಬರ್ 51.

ಮೃತಪಟ್ಟ ಸಾಹುಕಾರ ಸೈದ್ ರಸೂಲ್‌ಸಾಬರ ಆಸ್ತೀ ವಿಷಯದಲ್ಲಿ—

ಅರ್ಜಿದಾರು) ಖಾತುನಾಬಿಯು, ಮೃತಪಟ್ಟ ಸದರೀ ಸೈದ್ ರಸೂಲ್ ಸಾಬರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಣ ತಾ!! ಹಿರೋಡ ಸ್ಥಳವ ಸದರೀ ಖಾತುನಾಬಿ ಸದರೀ ವಾಸಸ್ಥರಾಗಿ ಮೃತಪಟ್ಟ ಸೈದ್ ರಸೂಲ್‌ಸಾಬರ ಜಿಂವಗಿ ಬಗ್ಯಾಗಿ ಬರತಕ್ಕ 4506 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಖಾತುನಾಬಿಯ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 29ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಕೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈದ್ ರಸೂಲ್ ಸಾಬರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಮಾರ್ಚಿ ತಿಂಗಳು 8ನೇ ತಾರೀಖಿನಲ್ಲಿ ಕೋರ್ಟುಮೊಹರ್ ದುತ್ತುನನ್ನ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಹೇಮಾಜಿರಾವ್, ಡಿಸ್ಟ್ರಿಕ್ಟ ಜಡ್ಜ.

ಚಾಮರಾಜನಗರದ ಫಾರೆಸ್ಟು.

ಪೂರ್ವಕ್ಕೆ — ಕೊಯಂಬತೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳ ಫಾರೆಸ್ಟುಗಳ ಮಧ್ಯೆ ಮಾಡಿರುವ ಡಿವಿಸ್ಟಾರ್ಕೇರ್ಷ ಲೈನ್ ಹೊನ್ನೆ ಮತ್ತಿ ಬೆಟ್ಟದ ಮೇಲ್ಭಾಗದಲ್ಲಿ ಹಾಕ ಇರುವ ಯಳಂದೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ಇವುಗಳ (ಮೂಗುಡ್ಡಿ) ಯಂಬ ಮೂರುಯಲ್ಲೆ ಗುರುತುಗಳ ಬಳಿ ಪ್ರಾರಂಭವನ್ನು ಹೊಂದಿ ದಕ್ಷಿಣಕ್ಕಾಗಿ ಕೆಳಗೆ ನಮೂದಿಸಿರುವ ಮುಖ್ಯವಾದ ಸ್ಥಳಗಳಮೇಲೆ ಹಾಕಿಯಿರುತ್ತೆ.

1. ಅತ್ತಿಮರದ ಕಾನು
2. ದೇವಗಿರಿ
3. ಕೆಂಚಮಾವನಕಣಿವೆ
4. ಗೆರಗೇಕಲ್ಲು
5. ಬಳಿಮುರಿ ಆರೆ

ದಕ್ಷಿಣಕ್ಕೆ—ಮೇಲೆ ನಮೂದಿಸಿರುವ ಬಿಳಿಮುರಿ ಅರೆಯಿಂದ ಲೈನು ಪಶ್ಚಿಮಕ್ಕಾಗಿ ಕೆಳಗೆ ನಮೂದಿಸಿರುವ ಸ್ಥಳಗಳ ಮೇಲೆ ಹಾಕಿರುತ್ತೆ.

1. ತಿರಗೂಡಿಪಳ್ಳ.
2. ಟಿಟ್ಟುನಕೊಪ್ಪದ ಮಾಳಾ.
3. ಹೊನ್ನಹೊಳೆ (ಹಾಸನೂರು ಪಕ್ಕದಲ್ಲಿ ಕೊಯಂಬತೂರು ಮತ್ತು ಮೈಸೂರು ಫಾರೆಸ್ಟುಗಳ ಮಧ್ಯೆ ಯಿರುವ ಬೌಂಡರಿ ಲೈನು.)
4. ಶಾರೇಪಾಳ್ಯದ ಸಮೀಪದಲ್ಲಿರುವ ಯಲ್ಲೆ ಗುರುತಿನ ಕಂಭವು.
5. ಚಪ್ಪರದ ನಾಯಿಬೇಲದ ಬೆಟ್ಟ.
6. ಡಬ್ಬಾಣದ ಮೇಡು.
7. ದೊಡ್ಡನ ಆನೆಬೆಟ್ಟ.
8. ಪುಟ್ಟಧೀರನ ಗೋನಿಬೆಟ್ಟ.
9. ಮೂಳನಪಾಳ್ಯದ ಯಲ್ಲೆ ಗುರುತುಗಳು.
10. ಸುಲಗುಡ್ಡೀ ಬೆಟ್ಟ.
11. ಕುಂಬಾರಗುಂಡಿ.
12. ಮೇಲೆ ನಮೂದಿಸಿದ ರೋಡು ಪಕ್ಕದಲ್ಲಿರುವ ಮೈಸೂರು ಮತ್ತು ಕೊಯಂಬತೂರು ಫಾರೆಸ್ಟುಗಳ ಮಧ್ಯೆ ಇರುವ ಯಲ್ಲೆ ಗುರುತುಗಳು.
13. ಹೊನ್ನೆಗೌಡನಹಳ್ಳಿ ಮತ್ತು ಸಂಣನಮೆರದ ಯಲ್ಲೆ ಗುರುತುಗಳು.
14. ಅತ್ತಿಕಲ್ ಪುರದಬಳಿ ಮಾಡಿರುವ ಹೊಸ ಡಿಮಾರ್ಕೇಷನ್ ಲೈನ್ ವರಗೆ ಮೈಸೂರು ಮತ್ತು ಕೊಯಂಬತೂರು ಫಾರೆಸ್ಟುಗಳ ಯಲ್ಲೆ ಗುರುತುಗಳು.

ಪಶ್ಚಿಮಕ್ಕೆ—ಅತ್ತಿಕಲ್ ಪುರದಿಂದ ಚಾಮರಾಜನಗರ ಮತ್ತು ಯಳಂದೂರು ಯಲ್ಲೆ ಗುರುತುಗಳು ಹಾಕಲ್ಪಟ್ಟಿರುವ ಕಟ್ಟೈಕಲ್ಲು ಆಲದಮರದ ವರಿಗೆ ಮಾಡಿರುವ ಡಿಮಾರ್ಕೇಷನ್ ಲೈನ್ ಕೆಳಗೆ ನಮೂದಿಸಿರುವ ಸ್ಥಳಗಳ ಮೇಲೆ ಹಾಕಿರುತ್ತೆ.

1. ಹೊಂಗಲವಾಡಿ ರಸ್ತೆ.
2. ಅಲಮನ ಗುಡ್ಡಾ.
3. ಅಣಾ ತಮ್ಮಂದರ ಗುಡ್ಡಾ.

ಉತ್ತರಕ್ಕೆ—ಕಟ್ಟೈಕಲ್ಲು ಆಲದಮರದ ಬಳಿ ಇರುವ ಯಲ್ಲೆ ಗುರುತುಗಳಿಂದ ಲೈನು ಸೂಳೇಕಲ್ಲು ಬೆಟ್ಟವನ್ನು ಯಡಪಾರ್ಶ್ವಕ್ಕೆ ಪ್ರಳ್ಳದ್ದಾಗಿ ಪೂರ್ವಪಾರ್ಶ್ವಕ್ಕಾಗಿ ಕೆಳಗೆ ನಮೂದಿಸಿರುವ ಸ್ಥಳಗಳ ಮೇಲೆ ಹಾಕಿರುತ್ತೆ.

1. ಕೊಂಗನಕಾಡು ಹನುಮನ ಕಲ್ಲು.
2. ಕಂಚುಕಲ್ಲಿನ ಮೇಲೆ ಹಾಕಿರುವ ಯಲ್ಲೆ ಗುರುತು ನಂತರ ಲೈನು ಹೊನ ಮತ್ತಿಬೆಟ್ಟದ ಬಳಿ ಹಾಕಿರುವ ಮುಗ್ಗಡಿಯಂಬ ಯಲ್ಲೆ ಗುರುತುಗಳನ್ನು ಕೇರುತ್ತದೆ.

ತಾರೀಖು 15ನೇ ಮಾರ್ಚಿ 1889.

ಇದರಿಂದ ತಿಳಿಯಪಡಿಸುವದೇನಂದರೆ, ಸ್ಯ 1889ನೇ ಇಸವಿ ಏಪ್ರೆಲ್ ತಾರೀಖು 15ರಲ್ಲು ಈಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫೀಸರಿಂದ ಬೆಳ್ಳಮುಗಳೂರು ಡಿಪೋದಲ್ಲಿ ಈ ಕೆಳಗೆ ನಮೂದಾಗುವ ನಾಟುಗಳು ಹರಾಜು ಮಾಡಲ್ಪಡುವದು.

ಮರದ ತಪಶೀಲ್.	ಸಂಖ್ಯೆ.	ಸಲೆ ಅಡಿ.	ಷರಾ.
ತ್ಯಾಗ	1	19	630
ಕರಿಮತ್ತಿ	26	619	1068
ಜುಲಾರಿ	4	76	1590
ಹೊನ್ನೆ	2	38	688
ನಂದಿ	1	21	1440
ಯಿತ್ತಿಗ	3	50	368
ನೇರಲ	1	21	1440
ತ್ಯಾಗದ ಸರಗಳು	17	28	100
ಕಾಡು ಸರಗಳು	2	3	1265½
ಬಿಟ್ಟು ಬಿದರುಗಳು	78	0	0
ಜುಮ್ಲಾ	135	879	1677½

ಷರತ್ತು—ಸ್ಯ 1887ನೇ ಇಸವಿ ಆಗಸ್ಟು ತಾರೀಖು 30ರ ನಂ. 99ನೇ ಬಾಬತು ದಿವಾ ಸಾಹೆಬರವರ ನೋಟಿಫಿಕೇಷನ್‌ಮೇರೆ.

ಎಲ್. ರಿಕ್ಕೆಟ್ಸ್, ಫಾರೆಸ್ಟ್ ಇಂ|| ಜನರಲ್.